# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

## ಸಿ.ಸಿ ನಂ: 101/2021

ಪಿ.ಡಬ್ಲ್ಯೂ-4
ಸಿ.ಡಬ್ಲ್ಯೂ-7

| | | |
|---|---|---|
| ಹೆಸರು | : | ರಾಜವರ್ಧನ ಪಾಟೀಲ |
| ವಯಸ್ಸು | : | **29** ವರ್ಷ |
| ಉದ್ಯೋಗ | : | ಖಾಸಗಿ ಉದ್ಯೋಗಿ |
| ವಾಸ | : | ಲೋಕೊಳ್ಳಿ ಗ್ರಾಮ. |

ದಿನಾಂಕ 13-02-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸಸಅ ರವರಿಂದ**

ಚಾ.ಸಾ.1, 4 ಮತ್ತು 5 ರವರು ಗೊತ್ತು. ಆರೋಪಿತರು ಸಹ ಗೊತ್ತು. ದಿನಾಂಕ 25.08.2020 ರಂದು ರಾತ್ರಿ 9.30 ಗಂಟೆ ಸಮಯಕ್ಕೆ ಆರೋಪಿತರು ಹಾಗೂ ಚಾ.ಸಾ.4 ರವರ ನಡುವೆ ಗಲಾಟೆಯಾಗುತ್ತಿದ್ದು, ನಾನು ಚಾ.ಸಾ.4 ರವರ ತಾಯಿಗೆ ಸದರಿ ವಿಚಾರವನ್ನು ಫೋನ್ ಮೂಲಕ ತಿಳಿಸಿದ್ದು, ಚಾ.ಸಾ.1 ರವರು ಸ್ಥಳಕ್ಕೆ ಬಂದಿದ್ದು, ಚಾ.ಸಾ.1 ರವರಿಗೂ ಸಹ ಆರೋಪಿಗಳು ಹಲ್ಲೆ ಮಾಡಿರುತ್ತಾರೆ. ನಂತರ ನಾವು ಚಾ.ಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಪೋಲೀಸರು ಪಂಚನಾಮೆ ಮಾಡಲು ಬಂದಿದ್ದು, ಆಗ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

***(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)***

**ಪಾಟೀ ಸವಾಲುಃ ಸಸಅ ರವರಿಂದ**

ಆ ದಿನ ಆರೋಪಿತರು ಚಾ.ಸಾ.1, 4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ಆರೋಪಿತರು ಚಾ.ಸಾ.4 ರವರಿಗೆ ಹೊಡೆದು ಗಲಾಟೆ ಮಾಡುತ್ತಿದ್ದಾಗ, ಚಾ.ಸಾ.1 ರವರು ಗಲಾಟೆ ಬಿಡಿಸಲು ಹೋದಾಗ ಅವರಿಗೂ ಸಹ ಹಲ್ಲೆ ಮಾಡಿದ್ದು, ಚಾ.ಸಾ.1 ರವರು ಕೆಳಗೆ ಬಿದ್ದು ಅವರಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಿ.ಎಸ್.ಹೆಚ್. ವಕೀಲರಿಂದ</u>

ಚಾ.ಸಾ.1, 4 ಮತ್ತು 5 ರವರು ನಮ್ಮ ಸಂಬಂಧಿಕರಾಗಿರುತ್ತಾರೆ. ಚಾ.ಸಾ.1 ಹಾಗೂ ನಮ್ಮ ಮನೆ 100 ಮೀಟರ ಅಂತರದಲ್ಲಿ ಇರುತ್ತದೆ. ನಮ್ಮ ಮನೆಯಿಂದ ಆರೋಪಿತರ ಮನೆಗೆ ಸುಮಾರು ಅರ್ಧ ಕಿಲೋಮೀಟರ ದೂರವಾಗುತ್ತದೆ. ಹರಿ ಎನ್ನುವ ವ್ಯಕ್ತಿ ನನಗೆ ಬಂದು ಆರೋಪಿ ಮತ್ತು ಚಾ.ಸಾ.4 ರವರ ನಡುವೆ ಆಗಿರುವ ಜಗಳದ ಬಗ್ಗೆ ತಿಳಿಸಿ, ಚಾ.ಸಾ.1 ರವರು ಮೂರ್ಛೆ ತಪ್ಪಿರುವ ವಿಚಾರ ತಿಳಿಸಿರುತ್ತಾರೆ. ಸದರಿ ಹರಿ ಎನ್ನುವ ವ್ಯಕ್ತಿ 9.20 ಗಂಟೆಗೆ ನನ್ನ ಬಳಿ ಬಂದು ಸದರಿ ವಿಷಯವನ್ನು ತಿಳಿಸಿರುತ್ತಾನೆ. ಆ ನಂತರ ನಾನು ಸ್ಥಳಕ್ಕೆ ಹೋಗಿದ್ದು ಮೂರ್ಛೆ ತಪ್ಪಿ ಬಿದ್ದಿದ್ದ ಚಾ.ಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆಂದರೆ ಸರಿ. ಆಸ್ಪತ್ರೆಗೆ ನಾನು, ಚಾ.ಸಾ.1, 4 ಮತ್ತು 5 ಹೋಗಿರುತ್ತೇವೆ. ಮೊದಲು ನಾವು ನಮ್ಮ ಗ್ರಾಮದಲ್ಲಿರುವ ವೈದ್ಯರ ಬಳಿ ಚಾ.ಸಾ.1 ರವರನ್ನು ಕರೆದುಕೊಂಡು ಹೋಗಿದ್ದು, ನಂತರ ಖಾನಾಪೂರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಗೆ ಚಾ.ಸಾ.1 ರವರನ್ನು ನಾನು, ಚಾ.ಸಾ.4, 5 ಹಾಗೂ ಅವರ ಚಿಕ್ಕಪ್ಪ ಕರೆದುಕೊಂಡು ಹೋಗಿರುತ್ತೇವೆ. ನಮ್ಮ ಗ್ರಾಮದಲ್ಲಿರುವ ವೈದ್ಯರ ಬಳಿ 9.40 ಗಂಟೆಗೆ ಹೋಗಿದ್ದು, ಸದರಿಯವರು ಪರೀಕ್ಷಿಸಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಈ ಬಗ್ಗೆ ಪೋಲೀಸರಿಗೆ ಯಾವುದೇ ವಿಚಾರ ತಿಳಿಸಿರುವುದಿಲ್ಲ. ಹಣಮಂತ ಗುರವರರವರ ಟೆಂಪೋ ಟ್ರಾಕ್ಸ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ವಾಹನದ ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ.

ಚಾ.ಸಾ.4 ರವರಿಗೆ ಹಲ್ಲೆಯಿಂದ ಬಾಯಿಯಿಂದ ರಕ್ತಬರುತ್ತಿದ್ದು, ಚಾ.ಸಾ.1 ರವರಿಗೆ ಯಾವುದೇ ರೀತಿಯ ರಕ್ತದ ಗಾಯವಾಗಿರಲಿಲ್ಲ. ಚಾ.ಸಾ,1 ರವರನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿರುತ್ತೇವೆ. ಚಾ.ಸಾ.1 ರವರು ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಎರಡನೇ ಆರೋಪಿ ಸೈನ್ಯದಲ್ಲಿ ಹಾಗೂ ಮೂರನೇ ಆರೋಪಿ ಗೋವಾದಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಆರೋಪಿತರ ಕುಟುಂಬ ಒಳ್ಳೆಯ ಕುಟುಂಬವಾಗಿರುತ್ತದೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಪೋಲೀಸರಿಗೆ ದೂರನ್ನು ಯಾರು ನೀಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಚಾ.ಸಾ.1 ರವರು ಕರೆದುಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ನನಗೆ ಯಾವುದೇ ಘಟನೆಯ ಬಗ್ಗೆ ಮಾಹಿತಿ ಇಲ್ಲದಿದ್ದರೂ ಚಾ.ಸಾ.1 ರವರು ನನ್ನ ಸಂಬಂಧಿಕರಾಗಿದ್ದರಿಂದ ಅವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಯಾವುದೇ ಘಟನೆ ನಡೆದೇ

ಇರುವುದಿಲ್ಲವೆಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ, ಚಾ.ಸಾ,1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.